**ದಿನಾಂಕ 05.06.2018 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಎನ್.ಆರ್. ವಕೀಲರಿಂದ**

ವಾದಿ ಈ ದಾವೆಯನ್ನು ಜಮೀನನ್ನು ಭಾಗ ಮಾಡಬೇಕಾಗಿ ಹಾಕಿದ್ದಾರೆ. ದಾವಾ ಬಿ ಷೆಡ್ಯೂಲ್ ಸ್ವತ್ತು 1 ಎಕರೆ 7 ಗುಂಟೆ ಇದೆ ಎಂದರೆ ಸರಿ. ಮಹಾದೇವಯ್ಯ ಮತ್ತು ಮೈಲಾರಯ್ಯ ಸೋಮಶೇಖರ ಮತ್ತು ಶಿವರಾಜುರವರ ಕುಟುಂಬಕ್ಕೆ ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿ ಬೇರೆ ಬೇರೆ ಮಾಡಿಕೊಂಡಿದ್ದರು ಎಂದು ಹೇಳುತ್ತಾರೆ. ದಾವಾ ಬಿ ಷೆಡ್ಯೂಲ್ ಆಸ್ತಿಯಲ್ಲಿ ಅವರ ನಡುವೆ ಭಾಗ ಆಗಿತ್ತು ಎಂಬ ಬಗ್ಗೆ ದಾಖಲೆ ಕೊಟ್ಟಿಲ್ಲ. 1992 ರಲ್ಲಿ ಕರಾರು ಪತ್ರ ಮಹಾದೇವಯ್ಯ ಮತ್ತು ಸೋಮಶೇಖರ ನನಗೆ ಮತ್ತು ನನ್ನ ತಮ್ಮನಿಗೆ ಬರೆದು ಕೊಟ್ಟಿದ್ದರು. ನನ್ನ ಹೆಸರಿಗೆ ಮತ್ತು ನನ್ನ ತಮ್ಮನ ಹೆಸರಿಗೆ ಕರಾರು ಪತ್ರ ಬರೆದು ಕೊಡುವ ಸಮಯದಲ್ಲಿ ಒಟ್ಟು ಕುಟುಂಬದ ಹೆಸರಿನಲ್ಲಿ ಜಂಟಿಯಾಗಿ ದಾವಾ ಬಿ ಷೆಡ್ಯೂಲ್ ಆಸ್ತಿ ಪಹಣಿ ಬರುತ್ತಿತ್ತು ಎಂದರೆ ಸರಿ. ನಾನು ಕಂದಾಯ ದಾಖಲಾತಿಗಳನ್ನು ಆಗ ಪರಿಶೀಲನೆ ಮಾಡಿದ್ದೇನೆ. 1992 ರ ಹಿಂದಿನ ಕಂದಾಯ ದಾಖಲಾತಿಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದಾ ಎಂದರೆ ಸಾಕ್ಷಿ ನನಗೆ ಮಾಡಲು ಬೇಕು ಎಂದು ಹೇಳುತ್ತಾರೆ. ಒ.ಎಸ್. 170/95 ದಾವೆಯನ್ನು ಸೋಮಶೇಖರ ರವರ ವಿರುದ್ಧ ಕರಾರು ಪತ್ರದಂತೆ ಸ್ವತ್ತನ್ನು ನಮ್ಮ ಹೆಸರಿಗೆ ಬರೆದು ಕೊಟ್ಟ ನಂತರ ಹಾಕಿದ್ದೇನೆ. ನಮ್ಮ ಹೆಸರಿಗೆ ಕ್ರಯ ಪತ್ರವನ್ನು ಮಹಾದೇವಯ್ಯ ಬರೆದು ಕೊಟ್ಟಿಲ್ಲ. ಬರೆದುಕೊಟ್ಟ ಸೋಮಶೇಖರ ರವರ ಮೇಲೆ ದಾವೆ ಹಾಕಿದ್ದೆನು. ನನಗೆ ಕರಾರು ಪತ್ರದಲ್ಲಿ ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ 31 ಗುಂಟೆ ಬರೆದುಕೊಟ್ಟಿದ್ದರು. ನಂತರ ಸಾಕ್ಷಿ ಕರಾರು ಪತ್ರವನ್ನು 1 ಎಕರೆ 10 ಗುಂಟೆಗೆ ಬರೆದುಕೊಟ್ಟಿದ್ದರು 31 ಗುಂಟೆಗೆ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದರು ಎಂದು ಹೇಳುತ್ತಾರೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್. 199/10 ದಾವೆಯನ್ನು ಹಾಕಿದ್ದೇವೆ. ಸಾಕ್ಷಿಗೆ ಒ.ಎಸ್. 199/10 ರ ವಾದ ಪತ್ರವನ್ನು ತೋರಿಸಿ ಸಾಕ್ಷಿ ನೋಡಿ ಒಪ್ಪಿದ ಕಾರಣ ವಾದ ಪತ್ರವನ್ನು ನಿಪಿ. 22 ಎಂದು ಗುರುತಿಸಿಕೊಳ್ಳಲಾಯಿತು. ಆ ದಾವೆಯಲ್ಲಿ ಸಲ್ಲಿಸಿರುವ ಸಾಕ್ಷ್ಯ ಪ್ರಮಾಣ ಪತ್ರ ಮತ್ತು ಪಾಟೀಸವಾಲನ್ನು ಸಾಕ್ಷಿ ನೋಡಿ ಸಹಿ ತನ್ನದಲ್ಲ ಎಂದು ನಿರಾಕರಿಸಿರುತ್ತಾರೆ. ನಾನು ಒ.ಎಸ್. 199/10 ರಲ್ಲಿ ರಾಣಿಯವರ ಪಿತ್ರಾರ್ಜಿತ ಆಸ್ತಿ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒ.ಎಸ್. 125/97 ರ ತೀರ್ಪಿನ ಪ್ರತಿಯನ್ನು ನೀಡಿ ಸಾಕ್ಷಿ ಸ್ವತಃ ಪರಿಶೀಲಿಸಿ ನಾನು ಆ ಪ್ರಕಜರಣದಲ್ಲಿ ಮೋಹನಕುಮಾರ ಎಂಬ ವಕೀಲರನ್ನು

ನೇಮಿಸಿಕೊಂಡಿದ್ದೆ ಎಂದು ಒಪ್ಪಿಕೊಂಡಿದ್ದರಿಂದ ಸದರಿ ತೀರ್ಪಿನ ಪ್ರತಿಯನ್ನು ನಿ.ಪಿ. 23 ಎಂದು ಗುರುತಿಸಿಕೊಳ್ಳಲಾಯಿತು. ನಿ.ಪಿ. 23 ರ ಆದೇಶವನ್ನು ಪ್ರಶ್ನಿಸಿ ಆರ್.ಎ 103/2000 ಅಪೀಲನ್ನು ನಾನು ಮಹಾದೇವಯ್ಯನವರ ವಿರುದ್ಧ ಸಲ್ಲಿಸಿದ್ದೆನು ಎಂದರೆ ಸರಿ. ದಿನಾಂಕ 21.04.2006 ರಲಂದು ನಾನು ಸಲ್ಲಿಸಿದ ಮೇಲ್ಮನವಿ ಅರ್ಜಿ ನನ್ನ ವಿರುದ್ಧ ವಜಾ ಆಗಿತ್ತು ಎಂದರೆ ಸರಿಯಲ್ಲ. ಸದರಿ ಆರ್.ಎ 103/2000 ರ ತೀರ್ಪಿನ ಪ್ರತಿ, ಡಿಕ್ರಿ ಮತ್ತು ಆದೇಶ ಪ್ರತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಒಟ್ಟಾಗಿ ನಿ.ಪಿ. 24 ಎಂದು ಗುರುತಿಸಿಕೊಳ್ಳಲಾಯಿತು. ಆರ್.ಎ 103/2000 ರ ಆದೇಶದ ವಿರುದ್ಧ ನಾನು ಅಪೀಲು ಸಲ್ಲಿಸಿಲ್ಲ ಸಾಕ್ಷಿ ನನ್ನ ಪರ ಆಗಿದೆ ಎಂದು ಹೇಳುತ್ತಾರೆ. ದಾವಾ ಬಿ ಷೆಡ್ಯೂಲ್ ಆಸ್ತಿ ವಾದಿಗಳ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನಾನು ಬರೆಸಿಕೊಂಡಿರುವ ಕ್ರಯದ ಪತ್ರ ವಾದಿಯ ಭಾಗಾಂಶ ಹಕ್ಕಿಗೆ ಒಳಪಡುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ. 28 ರಿಂದ 33 ದಾಖಲಾತಿಗಳನ್ನು ಧ್ರಾಕ್ಷಾಯಿಣಿ ಕೊಟ್ಟಿದ್ದಾರೆ. ಧ್ರಾಕ್ಷಾಯಿಣಿ ಎಂಬುವವರನ್ನು ನನ್ನ ಪರ ಸಾಕ್ಷ ಮಾಡಿಸುತ್ತೇನೆ. ರಾಮಚಂದ್ರ ಎಂಬುವವರು ಧ್ರಾಕ್ಷಾಯಿಣಿಗೆ ಅವರ ಸಂಬಂದಧಿಕರು. ಸಾಕ್ಷಿಗೆ ನಿ.ಡಿ. 33 ನ್ನು ತೋರಿಸಿ ಧ್ರಾಕ್ಷಾಯಿಣಿರವರ ತಂದೆ ರಾಮಚಂದ್ರ ಎಂದು ಇದೆ ಎಂದರೆ ಸಾಕ್ಷಿ ಅವರ ಮತಸ್ಥರು ಎಂದು ಹೇಳುತ್ತಾರೆ. ನಿ.ಡಿ 28 ರಂದ 33 ದಾಖಲಾತಿಗಳನ್ನು ಧ್ರಾಕ್ಷಾಯಿಣಿ ಸಾಕು ಮಗಳು ಎಂದು ತೋರಿಸಲು ಹಾಕಿದ್ದೇನೆ. ಸಾಕು ಮಗಳು ಎಂದು ನಿ.ಡಿ. 28 ರಿಂದ 33 ರಲ್ಲಿ ಪ್ರತ್ಯೇಕವಾಗಿ ಬರವಣಿಗೆ ಆಗಿಲ್ಲ. 4 ನೇ ಪ್ರತಿವಾದಿ ಜಾನಕಿ ಈ ಮೃತಪಟ್ಟಿದ್ದಾರೆ ಅವರು ಸೋಮಶೇಖರನ 2 ನೇ ಹೆಂಡತಿ. ಸೋಮಶೇಖರನ ಮೊದಲನೇ ಹೆಂಡತಿ ಮತ್ತು 2 ನೇ ಹೆಂಡತಿಗೆ ಮಕ್ಕಳಿರಲಿಲ್ಲ. ಧ್ರಾಕ್ಷಾಯಿಣಿ ಎಂಬುವವರು ಸೋಮಶೇಖರ ಮತ್ತು ಜಾನಕಿರವರ ಸಾಕು ಮಗಳು ಎಂದು ಇದೇ ನ್ಯಾಯಾಲಯದ ಮುಂದೆ ಇದೇ ದಾವೆಯಲ್ಲಿ ಅರ್ಜಿ ಹಾಕಿದ್ದರು ಎಂದರೆ ಸರಿ. ಆ ಅರ್ಜಿಯನ್ನು ಈ ನ್ಯಾಯಾಲಯ ವಜಾ ಮಾಡಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಬಿ ಷೆಡ್ಯೂಲ್ ಆಸ್ತಿಯ ಮೇಲೆ ವಾದಿಗೆ ಹಕ್ಕು ಇದ್ದರೂ ನಾನು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಕ್ಕಿಲ್ಲ ಎಂದು ಸಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಒ.ಎಸ್. 170/95 ರಲ್ಲಿ ಚಿಕ್ಕಮಲ್ಲಮ್ಮನ ಗಂಡ ಮಹಾದೇವಯ್ಯನನ್ನು ಪಾರ್ಟಿಯನ್ನಾಗಿ ಮಾಡಿಲ್ಲ. ದಾವಾ ಬಿ ಷೆಡ್ಯೂಲ್ ಆಸ್ತಿ ಮಹಾದೇವಯ್ಯನವರ ಒಟ್ಟು ಕುಟುಬಂದ ಆಸ್ತಿ ಎಂದು ನನಗೆ 1995 ಇಸವಿಯಿಂದಲೂ ಗೊತ್ತಿತ್ತು ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಶಿವರಾಜು ಎಂಬುವವರನ್ನು ಪಾರ್ಟಿ ಮಾಡಿಲ್ಲ. ವಾದಿಯ ಗಂಡ ಉಮೇಶ ಅವರ ತಂದೆ ಶಿವರಾಜು ಎಂದರೆ ಸರಿ. ಶಿವರಾಜುರವರ ಕುಟುಂಬಕ್ಕೂ ದಾವಾ ಬಿ ಷೆಡ್ಯೂಲ್ ಆಸ್ತಿಯಲ್ಲಿ

ಹಿಸ್ಸೆಯ ಹಕ್ಕಿದೆ ಎಂದರೆ ಸರಿಯಲ್ಲ ಸಾಕ್ಷಿ ಅವರ ಹಿಸ್ಸೆಯನ್ನು ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ ಆದ್ದರಿಂದ ಶಿವರಾಜು ಮತ್ತು ಮಹಾದೇವಯ್ಯನವರನ್ನು ಒ.ಎಸ್. **170/95** ರಲ್ಲಿ ಪಾರ್ಟಿಯನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗಳ ನ್ಯಾಯಯುತ ಹಿಸ್ಸೆಯ ಹಕ್ಕಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ ಸಾಕ್ಷಿ ಅವರೇ ನನಗೆ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿ ಸ್ವತಃ ಕದ್ದು ಗದ್ದೆ ಕುಯ್ದಿದ್ದಿದ್ದಾರೆ ಎಂದು ಹೇಳುತ್ತಾರೆ ಗದ್ದೆ ಕುಯ್ದು ಬಗ್ಗೆ ದಾಖಲೆ ಕೊಟ್ಟಿಲ್ಲ. ನಿ.ಡಿ. **34** ಮತ್ತು **35** ನ್ನು ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಮರುವಿಚಾರಣೆ ಇರುವುದಿಲ್ಲ.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.